<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.</u>

ಒಎಸ್.ನಂ.11/2021

ಪಿಡಬ್ಲ್ಯೂ: 03

ಪ್ರಮಾಣವಚನ ಭೋಧಿಸಲಾಯಿತು. ದಿಃ 20.12.2023.

ಹೆಸರು : ಶ್ರೀ. ಸೈಯದ್ ಇಬ್ರಾನ್ ಖಾಜಿ

ತಂ/ಗಂ ಹೆಸರು : ಶ್ರೀ. ಸೈಯದ್ ಅಮ್ಜದ್

ವಯಸ್ಸು : 35 ವರ್ಷ

ಉದ್ಯೋಗ : ಮುಖ್ಯ ಖಾಜಿ ಆಳಂದ

ವಾಸಸ್ಥಳ : ಆಳಂದ.

---

<u>**ಮುಖ್ಯ ವಿಚಾರಣೆಃ** ವಾದಿ ಪರ ವಕೀಲರಿಂದಃ</u>

2008 ರಿಂದ ನಾನು ಆಳಂದಲ್ಲಿ ಮುಖ್ಯ ಖಾಜಿ ಅಂತ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನನಗಿಂತ ಮುಂಚೆ ನನ್ನ ತಂದೆ ಖಾಜಿಯಾಗಿದ್ದರು. ನಿಪಿ-21 ರಲ್ಲಿ ಸಾಕ್ಷಿ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-21(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಯನ್ನು ನಾನು ದಿಃ 08.11.2022 ರಂದು ನೀಡಿರುತ್ತೇನೆ. ಸದರಿ ದಾಖಲೆ ಪ್ರಕಾರ ಹುಸೇನ್ ಸಾಬ ಮತ್ತು ಚಾಂದಬೀ ರವರ ಮದುವೆ ಬಗ್ಗೆ ಸದರಿ ದಾಖಲೆ ನೀಡಿರುತ್ತದೆ. ಸದರಿ ಮದುವೆ ಲಾಡ ಚಿಂಚೋಳಿ ಗ್ರಾಮದಲ್ಲಿ ಆಗಿರುತ್ತದೆ. ನಿಪಿ-22 ರ ದಾಖಲೆ ಉರ್ದು ಭಾಷೆಯಲ್ಲಿ ಇದ್ದು, ಅದನ್ನು ಮದುವೆ ದಿನ ಬರೆದಿರುತ್ತದೆ. ನಿಪಿ-22 ರ ದಾಖಲೆಯ ಪ್ರಕಾರ ಹುಸೇನ್ ಸಾಬ ಮತ್ತು ಚಾಂದಬೀ ಮದ್ಯ ಮದುವೆಯಾಗಿದ್ದರ ಬಗ್ಗೆ ಬರೆದಿರುತ್ತದೆ.

ನಿಪಿ-22 ರ ಪ್ರಕಾರ ಮದುವೆ ದಿಃ 16.03.1961 ರಂದು ಆಗಿರುತ್ತದೆ. ನಿಪಿ-22 ರ ಪ್ರಕಾರ ಸಾಕ್ಷಿದಾರರ ಅಂತ ಇಬ್ಬರು ಇರುತ್ತಾರೆ. ಅವರೇಂದರೇ ಖಾಸಿಂ ಸಾಬ ಮತ್ತು ಇಸ್ಮಯಲ್ ಸಾಬ ಇರುತ್ತಾರೆ ಹಾಗೂ ಒಬ್ಬರು ವಕೀಲರು ಹುಸೇನ್ ಸಾಬ ಎಂಬುವವರು

ಇದ್ದರು. ವಲಿ ಅಂತ ಹುಡುಗಿಯ ತಂದೆ ಮದರ್‌ಸಾಬ ಇದ್ದರು. ಸದರಿ ಮೇಲೆ ಹೇಳಿದ ಮದುವೆ ಮಾಡಿಸಿದವರ ಹೆಸರು ಸೈಯದ್ ಅಬ್ದುಲ್ ರಜಾಕ್ ಇರುತ್ತದೆ. ನಮ್ಮ ಕಛೇರಿಯ ದಾಖಲೆಯ ಪ್ರಕಾರ ನಿಪಿ-22 ದಾಖಲೆ ನೀಡಿರುತ್ತೇವೆ.

**ಪಾಟೀ ಸವಾಲುಃ** 1 ರಿಂದ 5 ನೇ ಪ್ರತಿವಾದಿಯರ ಪರ ವಕೀಲರಿಂದಃ

(1 ರಿಂದ 5 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಏನು ಎಲ್ಲ ಎಂದು ಹೇಳಿರುತ್ತಾರೆ.)

**ಪಾಟೀ ಸವಾಲುಃ** 8 ಮತ್ತು 9 ನೇ ಪ್ರತಿವಾದಿಯರ ಪರ ವಕೀಲರಿಂದಃ

(ಈ ಹಂತದಲ್ಲಿ 8 ಮತ್ತು 9 ನೇ ಪ್ರತಿವಾದಿಯರ ಪರ ವಕೀಲರು ಪರ ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**